ಮುಸಿ ನಕ್ಕಿದ್ದ ಕಾರಣ, ವೇದಿಕೆಲಿ ತಡವರಿಸಿ ಅದು ನನಗೆ ತಿರುಗು ಬಾಣ ಆಗಬಾರದು ಅನ್ನುವ ಏಕಮೇವ ಉದ್ದೇಶದಿಂದ ಕಾರ್ಯಕ್ರಮ ಮುಗಿಯುವಲ್ಲಿಯವರೆಗೆ ಓದು ಬರಹ ಬಿಟ್ಟು ಭಾಷಣ ಒಂದನ್ನೇ ಎಡೆಬಿಡದೆ ಮಂತ್ರೋಚ್ಛಾರದಂತೆ ಪಠಿಸುತ್ತಿದ್ದೆ. ನಿದ್ದೆಯಲ್ಲೂ ಸನ್ಮಾನ್ಯ ಅಧ್ಯಕ್ಷರೇ...ಸಭಾಸದರೇ....ಪ್ರೀತಿಯ ಸಹಪಾಠಿಗಳೇ...

ನನ್ನ ಕನವರಿಕೆ ಕಂಡು ಅಜ್ಜಿಗೇ ಬೇಜಾರು ಬಂದು 'ಇಷ್ಟ್ ಸಣ್ಣ ಕೂಸಿಗೆ ಯಾಕೆ ಹಿಂಗೆ ಹೊರೆ ಹೊರ್ಸುದು... ಅವಳಿಗೆಂತ ಇನ್ನ್ ಓಟಿಗೆ ನಿಲ್ಲಿಕುಟ್ಟಾ...' ಅಂತ ಟೀಚರ್ ಮೇಲೆ ಗೊಣಗಿಕೊಳ್ಳುತ್ತಿದ್ದರು. ಆದರೆ, ನಾನು ಬಾಯಿಪಾಠ ಮಾಡುವುದರಲ್ಲಿ ನಿಸ್ಸೀಮೆ. ಅರ್ಥ ಆಗಲಿ ಆಗದಿರಲಿ ಪ್ರಶ್ನೋತ್ತರಗಳನ್ನೆಲ್ಲಾ ಒಂದೇ ಸಮ ಉರು ಹೊಡೆದು ಟೀಚರು ಕೊಟ್ಟಂತೆ ಅಕ್ಷರಶಃ ಇಳಿಸಿ ಅದಾಗಲೇ ಬೆನ್ನು ತಟ್ಟಿಸಿಕೊಂಡಿದ್ದೆ. ಎಡಬಿಡದೆ ಮೂರು ದಿನ ಬಾಯಿಪಾಠ ಅರಗಿಸಿಕೊಂಡು ಧೈರ್ಯವಾಗಿ ವೇದಿಕೆ ಹತ್ತಿ ಭಾಷಣ ಶುರು ಮಾಡಿದ್ದೆ.

ಹನಿಗೂಡಿದರೆ ಹಳ್ಳ... ತೆನೆಗೂಡಿದರೆ ಭತ್ತ, ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು... ಇಂತಹ ವಾಕ್ಯಗಳನ್ನೆಲ್ಲ ನಡು ನಡುವೆ ತುರುಕಿಸಿ ಎಲ್ಲರ ಕೈಯಿಂದ ಚಪ್ಪಾಳೆ ಗಿಟ್ಟಿಸಿಕೊಂಡಿದ್ದೆ. ಯಾರೋ ಸಹಪಾಠಿಗಳ ಹೆತ್ತವರೊಬ್ಬರು ನನ್ನ ಭಾಷಣ ಕೇಳಿ ನನಗೆ ಬಹುಮಾನವಾಗಿ ಐದು ರೂಪಾಯಿ ಕೊಟ್ಟಿದ್ದರು. ಅವರು ಕೊಟ್ಟದ್ದು ನೋಡಿ ಇನ್ನೊಬ್ಬ ಹೆತ್ತವರೂ ಕೂಡ ಐದು ರುಪಾಯಿ ಘೋಷಣೆ ಮಾಡಿದ್ದರು. ಆಗೆಲ್ಲ ಈ ರೀತಿ ಪ್ರೋತ್ಸಾಹಿಸುವುದು ಸರ್ವೇ ಸಾಮಾನ್ಯವಾಗಿತ್ತು. ಮತ್ತೆ ಒಬ್ಬರ ನೋಡಿ ಮತ್ತೊಬ್ಬರು ಕೊಡುವುದು ಪ್ರೆಸ್ಟೇಜಿನ ಸಂಗತಿ ಆಗಿತ್ತು. ಅಬ್ಬಾ! ನಾನು ನಿದ್ದೆಗೆಟ್ಟು ಬಾಯಿಪಾಠ ಮಾಡಿದ್ದು ವ್ಯರ್ಥ ಆಗಲಿಲ್ಲವಲ್ಲ ಅಂತ ಸಮಾಧಾನ ಆಯಿತು. ಆ ದಿನ ಟೀಚರ ಹಿಂದೆ ಮುಂದೆ ಓಲಾಡಿದೆ. ಟೀಚರಮ್ಮ ಏನಾದರೂ ತಾರೀಫು ಕೊಡ್ತಾರೋ ಏನೋ ನೋಡುವಾ ಅಂತ ಸಣ್ಣ ಆಸೆ. ಹ್ಮಾ! ಎಣಿಸಿದಂತೆ ಕರೆದೇ ಬಿಟ್ಟರು ಟೀಚರು. ಚೆಂದ ಭಾಷಣ ಮಾಡಿದೆ ನೀನು ಅಂತ ಹೇಳಿದಾಗ ನಿಜಕ್ಕೂ ಆ ದಿನ ಕಾಲು ನೆಲದ ಮೇಲೆಯೇ ಇರಲಿಲ್ಲ. ಒಂಥರಾ ದೊಡ್ಡ ಜನ ಆದಂತನ್ನಿನಿಸಿ ಏನೇ ಆಗಲಿ ನಾ ಮುಂದೆ ದೊಡ್ಡ ಭಾಷಣಗಾರ್ತಿ ಆಗಬೇಕು ಅಂತ ಅದಾಗಲೇ ತೀರ್ಮಾನಿಸಿದೆ. ಆ ದಿನ ಓರಗೆಯವರನ್ನೆಲ್ಲಾ ಬಿಟ್ಟು ಮನೆಗೆ ಓಡೋಡಿ ಬಂದು ಏದುಸಿರು ಬಿಡುತ್ತಾ ಮಾವನನ್ನು ಕರೆದು ಐದು ರುಪಾಯಿ ಮಾವನಿಗೆ ಕೊಟ್ಟು ಐದು ರುಪಾಯಿ ನಾನು ಇಟ್ಟುಕೊಂಡು, ಇನ್ನು ಮುಂದೆ ಭಾಷಣ ಬರೆದುಕೊಡು ಹೇಳಿದ್ರೆ ಪಿರಿ ಪಿರಿ ಮಾಡಬಾರದು, ಯಾರಾದರೂ ಮೆಚ್ಚಿ ದುಡ್ಡು ಕೊಟ್ಟರೆ ಫಿಫ್ಟಿ ಫಿಫ್ಟಿ ಅಂತ ಡೀಲ್ ಕುದುರಿಸಿಕೊಂಡೆ. ನಂತರ ಏನಿದ್ದರೂ ಯಾವ ಕಾರ್ಯಕ್ರಮ ಇದ್ದರೂ ಭಾಷಣಕ್ಕೆ ನಾನೇ. ಮತ್ತೆ ವೇದಿಕೆ ಹತ್ತಿದರೆ ಕೈಕಾಲು 'ದರ್ಪುದು' ಎಲ್ಲ ಕಡಿಮೆ ಆಗಿತ್ತು. ಮಾವ ಏನು ಬರೆದುಕೊಟ್ಟರೋ ಅದನ್ನ ಚಾಚೂ ತಪ್ಪದೆ ಎಮ್ಮೆ ಉಚ್ಚೆ ಹೊಯ್ದಂಗೆ ದರದರ ಅಂತ ಹೇಳಿ ಮುಗಿಸಿ ಬಿಡುತ್ತಿದ್ದೆ. ಆದರೆ, ನನ್ನ ಸಮಸ್ಯೆಯೆಂದರೆ ಯಾರಾದರೂ ಬರೆದುಕೊಟ್ಟದ್ದನ್ನ ಹೇಳುತ್ತಿದ್ದೆ ಎನ್ನುವುದನ್ನು ಹೊರತಾಗಿ ನಾನಾಗಿಯೇ ಮಾತನಾಡುವ ಕಲೆಗಾರಿಕೆ ಇರಲಿಲ್ಲ. ಈಗ ಹೇಗೋ ಮಾವ ಇದ್ದಾರಲ್ಲ... ಮುಂದಿನದು ನಂತರದ ಪ್ರಶ್ನೆ ಅಂತ ನನ್ನನ್ನು ನಾನೇ ಸಮಾಧಾನಿಸಿಕೊಂಡೆ. ಒಮ್ಮೆ ಪಾಠದ ನಡುವೆ ಪೂವಮ್ಮ ಟೀಚರ್ ಒಬ್ಬ ಉಗ್ಗಿರುವ ವ್ಯಕ್ತಿ (ಅವರ ಹೆಸರು ಈಗ ನೆನಪಿಗೆ ಬರುತ್ತಿಲ್ಲ) ಮುಂದೆ ಹೇಗೆ ಅಪ್ರತಿಮ ಭಾಷಣಕಾರ ಆದ ಅನ್ನುವ ಸ್ಫೂರ್ತಿದಾಯಕ ಕಥೆ ಹೇಳಿದ್ದನ್ನು ಕೇಳಿದ ಮೇಲೆ ಆ ಸಂಗತಿ ನನ್ನನ್ನು ಬಹುವಾಗಿ ಪ್ರೇರೇಪಿಸಿತು.

ಆ ವ್ಯಕ್ತಿ ಮಾತನಾಡುವಾಗ ಉಗ್ಗುವುದು ನೋಡಿ ಉಳಿದವರೆಲ್ಲ ಗೇಲಿ ಮಾಡುತ್ತಿದ್ದರಂತೆ. ಆದರೆ, ಅದರಿಂದ ಅವರು ವಿಚಲಿತರಾಗದೆ ದಿನಾ ಸಮುದ್ರ ದಂಡೆಯ ಮೇಲೆ ನಿಂತುಕೊಂಡು ಅಲೆಗಳ ಮುಂದೆ ಜೋರಾಗಿ ಮಾತನಾಡಲು ತೊಡಗಿದರಂತೆ. ಕ್ರಮೇಣ ಅವರ ಉಗ್ಗು ಹೋಗಿ ಅಸ್ಖಲಿತ ವಾಗ್ಮಿಗೆ ಹೆಸರಾದರಂತೆ. ಆ ಕಥೆ ಕೇಳಿದ ಮೇಲಿಂದ ನಾನು ಇನ್ನೂ ಚೆನ್ನಾಗಿ ಮಾತನಾಡಬೇಕು, ಮನೆಯವರ ಮುಂದೆ, ಓರಗೆಯವರ ಮುಂದೆ ಎಷ್ಟೊತ್ತಿಗೂ ಬಾಯಿಪಾಠ ಮಾಡುತ್ತಾ ಗೇಲಿಗೆ ಗುರಿಯಾಗಬಾರದು. ನಾ ಹುಟ್ಟಾ ಭಾಷಣಗಾರ್ತಿ ಅಂತ ಅವರೆಲ್ಲ ಹುಬ್ಬೇರಿಸುವಂತೆ ಮಾತನಾಡಬೇಕು ಅಂತ ಹುಕಿ ಬಂದು ಬಿಟ್ಟಿತು. ಆದರೆ, ಮಲೆನಾಡಿನವಳಾದ ನನಗೆ ಸಮುದ್ರ ಎಲ್ಲಿ ಸಿಗಬೇಕು? ಗದ್ದೆ ಬದಿಯಲ್ಲಿ ಸಣ್ಣ ನದಿಯೊಂದು ಹರಿಯುತ್ತಿತ್ತು. ಅದನ್ನೇ ಸಮುದ್ರವೆಂದು